# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ) ರವರ ಕಾರ್ಯಾಲಯ, ಶಿವಗಂಗೋತ್ರಿ,ದಾವಣಗೆರೆ-577002

ಇ-mail: registrarevaluationdvg@gmail.com ದೂ.ಸಂಖ್ಯೆ : 08192-208420, 208106


ಸಂಖ್ಯೆ:ದಾವಿವಿ/ಪವಿ/ಬಿ.ಇಡಿ/2021-22 | 4788 ದಿನಾಂಕ:24.01.2022

## -: ಪ್ರಕಟಣೆ :-

**ವಿಷಯ:** ಫೆಬ್ರವರಿ-2022ರ ಮಾಹೆಯಲ್ಲಿ ನಡೆಯುವ ಬಿ.ಇಡಿ II ಮತ್ತು IV ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿಯೊಂದಿಗೆ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29.12.2021

*****

ವಿಶ್ವವಿದ್ಯಾನಿಲಯದ ಪರೀಕ್ಷಾ ಸುಧಾರಣೆಗೆ ಸಂಬಂಧಪಟ್ಟಂತೆ ಮಾಹಿತಿ ತಂತ್ರಜ್ಞಾನವನ್ನು ಬೃಹತ್ ಮಟ್ಟದಲ್ಲಿ ಅಳವಡಿಸಲಾಗಿದ್ದು, ಈ ಸಂಬಂಧವಾಗಿ ಕಾಲೇಜುಗಳು ಹಾಗೂ ವಿದ್ಯಾರ್ಥಿಗಳಿಗೆ ಮಾಹಿತಿಗಳು/ಸಂದೇಶಗಳನ್ನು Web Portal/ Mobile App ಮುಖಾಂತರ ತಲುಪಿಸುತ್ತಿರುವುದರಿಂದ ಪರೀಕ್ಷಾ ಶುಲ್ಕವನ್ನು ಡಿಜಿಟಲ್ ಮಾದ್ಯಮದ ಮೂಲಕ ಸಂದಾಯ ಮಾಡುವುದು ಕಡ್ಡಾಯವಾಗಿದೆ.

ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸರ್ಕಾರದ ನಿರ್ದೇಶಾನುಸಾರ ಮುಂಬರುವ ಬಿ.ಇಡಿ. ಪ್ರಾಯೋಗಿಕ ಹಾಗೂ ಲಿಖಿತ ಪರೀಕ್ಷೆಗಳನ್ನು ನಡೆಸುವ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು. ಶುಲ್ಕ ಪಾವತಿಸುವ ವಿವರ ಈ ಕೆಳಗಿನಂತಿದೆ.

### ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

| | | |
|---|---|---|
| **ದಂಡಶುಲ್ಕವಿಲ್ಲದೆ** | ---------------------------- | 27.01.2022 ರಿಂದ 03.02.2022 ರವರೆಗೆ |
| **ದಂಡಶುಲ್ಕ ರೂ.120 ರಂತೆ ಪ್ರತಿ ಸೆಮಿಸ್ಟರ್‌ಗೆ** | ---------------------------- | 04.02.2022 ರಿಂದ 06.02.2022 ರವರೆಗೆ |
| **ದಂಡಶುಲ್ಕ ರೂ.600 ರಂತೆ ಪ್ರತಿ ಸೆಮಿಸ್ಟರ್‌ಗೆ** | ---------------------------- | 07.02.2022 |

### ಶುಲ್ಕದ ವಿವರಗಳು:

**ಬಿ.ಇಡಿ ಸೆಮಿಸ್ಟರ್ ಸ್ಕೀಂ:-**

| | | |
|---|---|---|
| 01 | 2ನೇ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ, | ಪರೀಕ್ಷಾ ಶುಲ್ಕ ರೂ. 792.00<br>ಅಂಕಪಟ್ಟಿ ಶುಲ್ಕ ರೂ. 182.00<br>---------<br>ಒಟ್ಟು ಶುಲ್ಕ ರೂ. 974.00 |
| 02 | 4ನೇ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ<br>**ಪ್ರಾಯೋಗಿಕ ಪರೀಕ್ಷೆಗೆ** | ಪರೀಕ್ಷಾ ಶುಲ್ಕ ರೂ. 792.00<br>ಅಂಕಪಟ್ಟಿ ಶುಲ್ಕ ರೂ. 182.00<br>500.00<br>---------<br>ಒಟ್ಟು ಶುಲ್ಕ ರೂ. 1474.00 |
| 03 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ ಮೂರನೇ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.792/- ಕ್ಕೆ ಒಳಪಟ್ಟು | ರೂ. 182.00 |
| 04 | ಪ್ರಾಯೋಗಿಕ ಪರೀಕ್ಷೆಗೆ ಒಂದ ವಿಷಯಕ್ಕೆ (ಫೇಲ್ ವಿದ್ಯಾರ್ಥಿಗಳಿಗೆ) | ರೂ. 275.00 |
| 05 | ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ.100.00 |

**ಪ್ರವೇಶಾತಿ ಸಂದರ್ಭದಲ್ಲಿ ಪದವಿ ಪ್ರಮಾಣ ಪತ್ರಕ್ಕಾಗಿ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳು ಅಂತಿಮ ಸೆಮಿಸ್ಟರ್ ಪರೀಕ್ಷಾ ಶುಲ್ಕದ ಜೊತೆಯಲ್ಲಿಯೇ ಕಡ್ಡಾಯವಾಗಿ ಪದವಿ ಪ್ರಮಾಣ ಪತ್ರದ ಶುಲ್ಕವನ್ನು ಈ ಕೆಳಕಂಡಂತೆ ಪ್ರತ್ಯೇಕವಾಗಿ ಪಾವತಿಸುವುದು.**

| ಪದವಿ ಪ್ರಮಾಣ ಪತ್ರದ ಶುಲ್ಕ | ಸಾಮಾನ್ಯ | ಎಸ್‌ಸಿ/ಎಸ್‌ಟಿ |
|---|---|---|
| ಅರ್ಜಿ ಶುಲ್ಕ ಸೇರಿದಂತೆ | ರೂ.800/- | ರೂ.650/- |

## ವಿದ್ಯಾರ್ಥಿಗಳಿಗೆ ಸೂಚನೆ:-

1. ವಿದ್ಯಾರ್ಥಿಗಳು **Online** ಮುಖಾಂತರ ಅರ್ಜಿ ಸಲ್ಲಿಸಲು **studentportal.universitysolutions.in** ನಲ್ಲಿ **login** ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.
3. ವಿದ್ಯಾರ್ಥಿಗಳು ಪ್ರವೇಶ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
4. ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡಲು ಈ ಕೆಳಕಂಡ ವಿಧಾನವನ್ನು ಒದಗಿಸಲಾಗಿದೆ.
    - ವಿದ್ಯಾರ್ಥಿಯು Web Portal ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card/ Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.
5. ವಿದ್ಯಾರ್ಥಿಗಳು ತಮ್ಮ Web Portal ನಿಂದ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಸ್ವತಃ ಪಡೆಯಬಹುದು.
6. ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಿದ ತಕ್ಷಣ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯುವ ಅರ್ಹತೆ ಇದೆಯೆಂದು ಪರಿಗಣಿಸಲಾಗುವುದಿಲ್ಲ.

**ವಿಶೇಷ ಸೂಚನೆ:** ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು. ಹಾಗೂ 2 ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮರುಪಾವತಿಗೆ ಅವಕಾಶವಿರುವುದಿಲ್ಲ.

7. **ಅ) ರೂ.2,50,000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ Fresher's ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ) ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಇಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ.182/- (ಒಂದು ನೂರ ಎಂಬತ್ತೆರಡು) ನ್ನು ಮಾತ್ರ ಪಾವತಿಸಬೇಕು.**
8. **ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಈ ವರ್ಗದವರಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು.**
9. **ರೂ.2,50,000 ಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪ್ರವರ್ಗ-1ರ Fresher's ವಿದ್ಯಾರ್ಥಿಗಳು ಹಾಗೂ ರೂ,1,00,000/-ಕ್ಕಿಂತ ಕಡಿಮೆ ಆದಾಯ ಹೊಂದಿರುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು 2ಎ, 3ಎ, 3ಬಿ ಸೇರಿದ Fresher's ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯ್ತಿ ಇರುತ್ತದೆ. ಆದರೆ ಅಂತಹ ವಿದ್ಯಾರ್ಥಿಗಳು ಹಿಂದಿನ ಸೆಮಿಸ್ಟರ್/ವರ್ಷದಲ್ಲಿ ಎಲ್ಲಾ ವಿಷಯಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಆಗ ಅಂಕಪಟ್ಟಿ ಶುಲ್ಕ ರೂ.182/- (ಒಂದು ನೂರ ಎಂಬತ್ತೆರಡು)ನ್ನು ಮಾತ್ರ ಪಾವತಿಸಬೇಕು. ಮಾಹಿತಿಗಾಗಿ ಸರ್ಕಾರಿ ಆದೇಶದ ಪ್ರತಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಿದೆ.**
10. **ಫೇಲಾದ ಸೆಮಿಸ್ಟರ್‌ನ ಪತ್ರಿಕೆಗಳಿಗೆ ಶುಲ್ಕ ವಿನಾಯ್ತಿ ಇರುವುದಿಲ್ಲ. ನಿಗದಿತ ಶುಲ್ಕ ಪಾವತಿಸಬೇಕು.**
11. **ಪ್ರವರ್ಗ-2ಃ ಗೆ ಸೇರಿದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ ಈ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಲೇಬೇಕು. ಕಾರಣ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:ಎಂಡಬ್ಲ್ಯುಡಿ:400:ಎಂಡಿಎಸ್-2014 ದಿನಾಂಕ:17-10-2014ಇಲಾಖೆ, ಬೆಂಗಳೂರು. ಈ ಆದೇಶದಲ್ಲಿ ಶುಲ್ಕ ವಿನಾಯಿತಿಯನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ.**
12. **ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು**

## ಪ್ರಾಚಾರ್ಯರಿಗೆ ಸೂಚನೆ:-

13. ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು Web Portal ಮುಖಾಂತರ ಮಾಡಬೇಕು.
14. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ (Register No.) ಹಾಗೂ ಗುರುತಿನ ಸಂಖ್ಯೆ (Student ID) ನ್ನು ಕಾಲೇಜುಗಳಿಗೆ ಅಂತರ್ಜಾಲದ ಮುಖಾಂತರ ಕಳುಹಿಸುವುದು.
15. ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಎಲ್ಲಾ ರೀತಿಯ ಅರ್ಹತೆಗಳು ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.

16. ಕಾಲೇಜಿನ ಪ್ರಾಂಶುಪಾಲರು Web Portal ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು/ಪರೀಕ್ಷಾ ಶುಲ್ಕದ ರಿಯಾಯಿತಿಯ ಬಗ್ಗೆ ಹಾಗೂ ಪ್ರವೇಶ ಪತ್ರಿಕೆಯ ತಡೆಯ ಬಗ್ಗೆ ದೃಢೀಕರಿಸಬೇಕು.
17. ಕಾಲೇಜು ಪರಿಶೀಲಿಸಿ ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ Web Portal ಮುಖಾಂತರ ತಿಳಿಸಲಾಗುವುದು.
18. ಕಾಲೇಜುಗಳಿಗೆ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿ ಮಾಡಿದ ವಿವರಗಳು ಕಾಲೇಜಿನ Web Portal ನಲ್ಲಿ ಲಭ್ಯವಿರುತ್ತದೆ.
19. ಕಾಲೇಜಿನ ಬ್ಯಾಂಕ್‌ನಲ್ಲಿ ವಿದ್ಯಾರ್ಥಿಗಳು ಸಂದಾಯ ಮಾಡಿದ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದೊಳಗೆ Payment Gateway ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.
20. ವಿಶ್ವವಿದ್ಯಾನಿಲಯವು ಪರೀಕ್ಷಾ ಪ್ರವೇಶ ಪತ್ರವನ್ನು ಅಂತರ್‌ಜಾಲದ ಮುಖಾಂತರವೇ ವಿದ್ಯಾರ್ಥಿಗಳಿಗೆ ಒದಗಿಸುವುದು.
21. ಅವಶ್ಯವಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ವಿಶ್ವವಿದ್ಯಾನಿಲಯದ ನಿರ್ದೇಶಾನುಸಾರ ಕಾಲೇಜುಗಳಲ್ಲಿ ಮುದ್ರಿಸಿ ಒದಗಿಸತಕ್ಕದ್ದು.
22. ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು Web Portal ಮುಖಾಂತರ ತಿಳಿಸುವುದು. ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.
23. ಕಾಲೇಜಿಗೆ ಸಂಬಂಧಪಟ್ಟ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪಟ್ಟಿಯನ್ನು Web Portal ಮುಖಾಂತರ ಒದಗಿಸಲಾಗುವುದು.
24. ಪ್ರಾಯೋಗಿಕ ಪರೀಕ್ಷೆಯ ತಯಾರಿಯನ್ನು ಹಾಗೂ ಅಂಕಗಳ ದಾಖಲಾತಿಯನ್ನು ಮತ್ತು Batch Preparation ಕಾಲೇಜಿನ Web Portal ಮುಖಾಂತರವೇ ಮಾಡುವುದು.
25. ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕೊಠಡಿಗಳನ್ನು (Room Allotment) ಆನ್‌ಲೈನ್ ಮೂಲಕ ನಿಗದಿಪಡಿಸಿಕೊಳ್ಳುವುದು.
26. Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ಧಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್ ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.
27. ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್ ಲೈನ್ ಮೂಲಕವೇ ನಮೂದಿಸುವುದು.
28. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ಇತರೆ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, **ಸರ್ಕಾರಿ ಆದೇಶ ಸಂಖ್ಯೆ:ಹಿವಿಕ:589: ಬಿಎಂಎಸ್:2013:ಇಲಾಖೆ,ಬೆಂಗಳೂರು. ಇವರ ದಿನಾಂಕಃ 05-10-2013ರ ಪ್ರಕಾರ** ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆಗೆ ಕ್ರಮ ಕೈಗೊಳ್ಳತಕ್ಕದ್ದು.
29. ಪ್ರಾಚಾರ್ಯರುಗಳು ಪರೀಕ್ಷಾ ಶುಲ್ಕ/ ಇತರೆ ಶುಲ್ಕಗಳ ಮರುಭರಿಕೆಗೆ ಸಂಬಂಧಿಸಿದಂತೆ, **ಆಯುಕ್ತರ ಕಛೇರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. ಇವರ ಸಂಖೆ:ಹಿಂವಕಇ/ಶುವಿ/ಸಿ.ಆರ್-34:2014-15 ದಿನಾಂಕ: 19-09-2014ರ ಪ್ರಕಾರ** ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಶುಲ್ಕಮರುಭರಿಕೆ ಹಣವನ್ನು ಪ್ರಾಚಾರ್ಯರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಶುಲ್ಕ ಮರುಭರಿಕೆಯಾದ ನಂತರ ಸದರಿ ಮೊತ್ತವನ್ನು ದಾವಣಗೆರೆ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳತ್ತಕ್ಕದ್ದು.
30. **ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ (ಪ್ರವರ್ಗ-1,2ಎ,3ಎ,3ಬಿ), ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಪಟ್ಟಿಯನ್ನು Web Portal ಮುಖಾಂತರ ಸಿದ್ಧಪಡಿಸಿ ಈ ಕಛೇರಿಗೆ ಸಲ್ಲಿಸತ್ತಕ್ಕದ್ದು,**
31. ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.
32. **ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ** ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪ್ರಾಚಾರ್ಯರು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿ ವೇತನದಲ್ಲಿ ಕಡ್ಡಾಯವಾಗಿ ಕಟಾಯಿಸಿ ಎಲ್ಲಾ ವಿವರಗಳೊಂದಿಗೆ ವಿಶ್ವವಿದ್ಯಾನಿಲಯದ ನಿಧಿಗೆ Payment Gateway ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.
33. ಆಂತರಿಕ ಅಂಕಗಳ ಮಾರ್ಕ್ಸ್ ಲಿಸ್ಟ್‌ಗಳನ್ನು ವಿಶ್ವವಿದ್ಯಾನಿಲಯವು ಮುಂದೆ ತಿಳಿಸುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು.
34. ಮುದ್ರಿತ ನಮೂನೆಗಳು (ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಕಳುಹಿಸುವ **ದಿನಾಂಕವನ್ನು** ಮುಂದೆ ತಿಳಿಸಲಾಗುವುದು.
35. ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ. ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಕಾರಣ, ಒಮ್ಮೆ ಪರೀಕ್ಷೆ ಬರೆಸಿದಲ್ಲಿ

ಅಭ್ಯರ್ಥಿ ಪಟ್ಟಿಯಲ್ಲಿ ಇಲ್ಲದವರ ಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.

36. ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

37. ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವ ವಿದ್ಯಾನಿಲಯಕ್ಕೆ ಕಳುಹಿಸಬೇಕು.

**ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 6363341215, 6363337901 ಹಾಗೂ 6363351762 ಸಂಪರ್ಕಿಸಬಹುದು.**

**<u>ವಿಶೇಷ ಸೂಚನೆ:</u>**

1)ದ್ವಿಗುಣ ಅವಧಿ ಮುಗಿದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.

2)ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯತಿ ಪಡೆದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾದ ಹಣವನ್ನು ಕೂಡಲೇ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡದಿರುವುದು ಕಂಡು ಬರುತ್ತಿದೆ. ಮಂಜೂರಾದ ಹಣವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸದೇ ಕಾಲೇಜಿನವರು ಉಳಿಸಿಕೊಂಡಲ್ಲಿ ಇಂತಹ ಪ್ರಕರಣಗಳನ್ನು ಗಂಭೀರವೆಂದು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577 007.

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್, ಬೆಂಗಳೂರು.
6. ಕಛೇರಿ ಪ್ರತಿ.

************